# ಕರ್ನಾಟಕ ಲೋಕಸೇವಾ ಆಯೋಗ

**"ಉದ್ಯೋಗ ಸೌಧ, ಬೆಂಗಳೂರು – 560001"**

ದಿನಾಂಕ: 21–08–2020

ಇ(1)2929/2020–21/ಪಿಎಸ್‌ಸಿ

## ಸೇರ್ಪಡೆ ಅಧಿಸೂಚನೆ

ಉಲ್ಲೇಖ: 1. ಅಧಿಸೂಚನೆ ಸಂಖ್ಯೆ:ಇ(1) 3037/2019–20/ಪಿಎಸ್‌ಸಿ, ದಿನಾಂಕ:31–01–2020
2. ಸೇರ್ಪಡೆ ಅಧಿಸೂಚನೆ ಸಂಖ್ಯೆ:ಇ(1) 3099/2019–20/ಪಿಎಸ್‌ಸಿ, ದಿನಾಂಕ:24–02–2020
3. ತಿದ್ದುಪಡಿ ಅಧಿಸೂಚನೆ ಸಂಖ್ಯೆ:ಇ(1) 3100/2019–20/ಪಿಎಸ್‌ಸಿ, ದಿನಾಂಕ:25–02–2020
4. ತಿದ್ದುಪಡಿ ಅಧಿಸೂಚನೆ–2 ಸಂಖ್ಯೆ: :ಇ(1) 3163/2019–20/ಪಿಎಸ್‌ಸಿ, ದಿನಾಂಕ:06–03–2020
5. ತಿದ್ದುಪಡಿ ಅಧಿಸೂಚನೆ–3 ಸಂಖ್ಯೆ: :ಇ(1) 1506/2020–21/ಪಿಎಸ್‌ಸಿ, ದಿನಾಂಕ:05–08–2020
6. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 74 ಸೆನೆನಿ 2006, ದಿನಾಂಕ:30–10–2007
7. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ 9260/2020ರಲ್ಲಿನ ದಿನಾಂಕ:20–08–2020ರ ಆದೇಶ

* * *

ಆಯೋಗವು ನಡೆಸುವ ಗೆಜೆಟೆಡ್ ಪ್ರೊಬೇಷನರ್ ನೇಮಕಾತಿಗೆ ಸಂಬಂಧಿಸಿದಂತೆ ಉಲ್ಲೇಖ (6)ರಲ್ಲಿ ಅಂಧ/ದೃಷ್ಟಿಮಾಂಧ್ಯ ಮೀಸಲಾತಿ ಕೋರಿರುವ ಅಭ್ಯರ್ಥಿಗಳಿಗೆ ಪೂರ್ವಭಾವಿ ಪರೀಕ್ಷೆಗೆ ಪ್ರತಿ ಒಂದು ಗಂಟೆಗೆ ಹತ್ತು ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡುವುದು ಎಂದು ನಿಗದಿಪಡಿಸಲಾಗಿರುತ್ತದೆ. ಪ್ರಸ್ತುತ The National Federation of the Blind ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಪಿಟಿಷನ್ ಸಂಖ್ಯೆ 9260/2020ರಲ್ಲಿ ನ್ಯಾಯಾಲಯವು ದಿನಾಂಕ:20–08–2020ರಂದು ನೀಡಿದ ತನ್ನ ಆದೇಶದಲ್ಲಿ ಭಾರತ ಸರ್ಕಾರದ ಅಧಿಕೃತ ಜ್ಞಾಪನ ದಿನಾಂಕ:29–08–2018ರಲ್ಲಿ Clause (xii) ನಲ್ಲಿ ತಿಳಿಸಿರುವಂತೆ ಪ್ರಕರಣದಲ್ಲಿನ ಮೊದಲನೇ ಪ್ರತಿವಾದಿಯಾದ ಕರ್ನಾಟಕ ಲೋಕಸೇವಾ ಆಯೋಗವು ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳಿಗೆ 20 ನಿಮಿಷಗಳ ಹೆಚ್ಚುವರಿ ಸಮಯ ನೀಡುವುದು ಸೂಕ್ತವೆಂದು ಅಭಿಪ್ರಾಯಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯವು ಅಭಿಪ್ರಾಯಿಸಿರುವಂತೆ ಆಯೋಗವು ದಿನಾಂಕ:24–08–2020ರಂದು ನಡೆಸಲಿರುವ ಗೆಜೆಟೆಡ್ ಪ್ರೊಬೇಷನರ್ ಪೂರ್ವಭಾವಿ ಪರೀಕ್ಷೆಗೆ ಹಾಜರಾಗುವ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳಿಗೆ ಪ್ರತಿ ಒಂದು ಗಂಟೆಗೆ ಇಪ್ಪತ್ತು ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲು ಸರ್ಕಾರದಿಂದ ಘಟನೋತ್ತರ ಅನುಮತಿ ಪಡೆಯುವ ಷರತ್ತಿನ ಮೇರೆಗೆ ನಿಗದಿಪಡಿಸಿದೆ.

ಆಯೋಗವು ಸದರಿ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಪೂರ್ವಭಾವಿ ಪರೀಕ್ಷೆಗೆ ಅರ್ಜಿ ಸಲ್ಲಿಸಿದ ಎಲ್ಲಾ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳಿಗೆ ರಾಜ್ಯದ ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿಯನ್ನು ರಚಿಸಿ, ವೈದ್ಯಕೀಯ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಲಾಗಿತ್ತು. ಪ್ರಸ್ತುತ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಮಿಕ ರೋಗದ ಹಿನ್ನೆಲೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಿದ್ದ ಎಲ್ಲಾ ಅಭ್ಯರ್ಥಿಗಳು ಹಾಜರಾಗಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ದಿನಾಂಕ: 24–08–2020ರಂದು ನಡೆಸಲಿರುವ ಪೂರ್ವಭಾವಿ ಪರೀಕ್ಷೆಗೆ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಡೆಸಿ ವೈದ್ಯಕೀಯ ಮಂಡಳಿಯು ನೀಡುವ ವರದಿಗಳನ್ನು ನಿರೀಕ್ಷಿಸಿ ಈ ಷರತ್ತಿಗೊಳಪಟ್ಟಂತೆ ಈ ಎಲ್ಲಾ ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗಿದೆ. ಮೇಲ್ಕಂಡ ಉಲ್ಲೇಖಿತ (6)ರ ಸರ್ಕಾರದ ಆದೇಶದನ್ವಯ ವೈದ್ಯಕೀಯ ಪರೀಕ್ಷೆಗೆ ಒಳಪಟ್ಟ ಅಭ್ಯರ್ಥಿಗಳಲ್ಲಿ ಯಾವುದೇ ಅಭ್ಯರ್ಥಿಯು ಅಂಧ/ದೃಷ್ಟಿಮಾಂಧ್ಯ ಮೀಸಲಾತಿಗೆ ಅನರ್ಹರೆಂದು ವೈದ್ಯಕೀಯ ಸಮಿತಿಯು ಅಭಿಪ್ರಾಯ ವ್ಯಕ್ತಪಡಿಸಿದಲ್ಲಿ, ಅಂತಹ ಅಭ್ಯರ್ಥಿಗಳ ಅಂಧ/ದೃಷ್ಟಿಮಾಂಧ್ಯ ಮೀಸಲಾತಿಯನ್ನು ತಿರಸ್ಕರಿಸಲಾಗುವುದು.

ಮುಂದುವರೆದು, ಉಲ್ಲೇಖಿತ ಸರ್ಕಾರದ ಆದೇಶದಲ್ಲಿ ತಿಳಿಸಿರುವಂತೆ ಪೂರ್ವಭಾವಿ ಪರೀಕ್ಷೆಗೆ ಹಾಜರಾಗುವ ಅಂಧ/ದೃಷ್ಟಿಮಾಂಧ್ಯ ಅಭ್ಯರ್ಥಿಗಳು ಲಿಪಿಕಾರರನ್ನು ತಾವೇ ಕರೆದುಕೊಂಡು ಬರಬೇಕಾಗಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಕೋವಿಡ್–19 ಸಾಂಕ್ರಮಿಕ ರೋಗದ ಹಿನ್ನೆಲೆಯಲ್ಲಿ ಯಾವುದೇ ಅಭ್ಯರ್ಥಿಯು ಲಿಪಿಕಾರರನ್ನು ಕರೆದುಕೊಂಡು ಬರಲು ಸಾಧ್ಯವಿಲ್ಲದಿದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳು ಆಯೋಗಕ್ಕೆ ಮಾಹಿತಿ ನೀಡಲು SMS ಕಳುಹಿಸಲಾಗಿದ್ದು, ದಿನಾಂಕ:21–08–2020ರ ಸಂಜೆ 5.30 ಗಂಟೆಯೊಳಗಾಗಿ ಮಾಹಿತಿ ನೀಡಲು ಸೂಚಿಸಿದೆ. ಇಂತಹ ಅಭ್ಯರ್ಥಿಗಳಿಗೆ ಆಯೋಗದಿಂದ ಲಿಪಿಕಾರರನ್ನು ಒದಗಿಸಲು ಎಲ್ಲಾ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

Sathyavathy
(ಜಿ.ಸತ್ಯವತಿ) 21-8-2020
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.